# ಶ್ರೀ ವಲ್ಲಭಾಚಾರ್ಯರು

ಆಂಗ್ಲಮೂಲ: **ಸ್ವಾಮಿ ತಪಸ್ಯಾನಂದ** ಕನ್ನಡಕ್ಕೆ: **ಸ್ವಾಮಿ ವೀರೇಶಾನಂದ**

## ಭಾಗ ೩

ಅಲಹಾಬಾದಿನಲ್ಲಿ ಇದ್ದ ನಿವೃತ್ತಿಯ ಜೀವಿತಾವಧಿಯಲ್ಲಿಯೇ ಅವರು ತಮ್ಮ ಬಹುತೇಕ ತಾತ್ತ್ವಿಕ ಮತ್ತು ಭಕ್ತಿಪೂರಿತ ಗ್ರಂಥಗಳನ್ನು ರಚಿಸಿದರು. ಅವರಲ್ಲಿ ವಿನಯಭಾವವು ಎಷ್ಟೊಂದು ಮನೆಮಾಡಿತ್ತೆಂದರೆ, ತಮ್ಮ ಯಾವ ಗ್ರಂಥದಲ್ಲಿಯೂ ಕೂಡ ಅವರು ತಮ್ಮನ್ನು ಆಚಾರ್ಯರೆಂದು ಕರೆದುಕೊಂಡಿಲ್ಲ. ಯಾವತ್ತೂ ತಮ್ಮ ಹೆಸರನ್ನು ವಲ್ಲಭ ದೀಕ್ಷಿತ ಎಂದೇ ಅವರು ಉಲ್ಲೇಖಿಸಿದ್ದಾರೆ. ಅದು ವಂಶಾನುಗತವಾಗಿ ಬಂದ ಹೆಸರಾಗಿರಬಹುದು. ಅವರ ಇನ್ನೊಂದು ವೈಶಿಷ್ಟ್ಯವೆಂದರೆ, ತಮ್ಮ ಚಿಕ್ಕಪುಟ್ಟ ಕೃತಿಗಳನ್ನು ಹೊರತುಪಡಿಸಿ, ಬೇರಾವುದೇ ದೊಡ್ಡ ಕೃತಿಯನ್ನು ಅವರು ಸಂಪೂರ್ಣಗೊಳಿಸಲೇ ಇಲ್ಲ. ಬಾದರಾಯಣರ ಬ್ರಹ್ಮಸೂತ್ರ, ಭಾಗವತಕ್ಕೆ ಬರೆದ ಭಾಷ್ಯ - ಇವುಗಳು ಕೂಡ ಅಪೂರ್ಣವಾಗಿಯೇ ಉಳಿದಿವೆ. ಅವರಿಗಿಂತ ಮುಂಚೆ ಆಗಿಹೋದ ಮಹಾನ್ ಆಚಾರ್ಯರಾದ ಶಂಕರ, ರಾಮಾನುಜ ಮತ್ತು ಮಧ್ವರು ಬ್ರಹ್ಮಸೂತ್ರಗಳಿಗೆ ಸಂಪೂರ್ಣವಾಗಿ ಭಾಷ್ಯವನ್ನು ಬರೆದು ಆಚಾರ್ಯರೆಂದು ಹೆಸರುವಾಸಿಯಾಗಿದ್ದಾರೆ. ಆದರೆ ವಲ್ಲಭರು ಬ್ರಹ್ಮಸೂತ್ರದ ೩-೧-೩೩ನೆಯ ಸೂತ್ರದವರೆಗೆ ಮಾತ್ರ ತಮ್ಮ ಭಾಷ್ಯವನ್ನು ಬರೆದಿದ್ದಾರೆ. ಅಂದರೆ ಸುಮಾರು ಮೂರನೆಯ ಎರಡು ಭಾಗದಷ್ಟು ಸೂತ್ರಗಳಿಗೆ ಮಾತ್ರ ಅವರ ವಿವರಣೆ ಲಭ್ಯ. ಉಳಿದ ಸೂತ್ರಗಳಿಗೆ ಅವರ ಪುತ್ರರಾದ ವಿಠ್ಠಲನಾಥರು ಭಾಷ್ಯವನ್ನು ರಚಿಸಿ, ಗ್ರಂಥವನ್ನು ಪೂರ್ಣಮಾಡಿರುವುದು ಕಂಡುಬರುತ್ತದೆ. ಈ ಕಾರಣಕ್ಕಾಗಿಯೇ ಪ್ರಾಯಶಃ ವಲ್ಲಭರ ಬ್ರಹ್ಮಸೂತ್ರ ಭಾಷ್ಯವನ್ನು **ಅಣು ಭಾಷ್ಯ** ಎಂದು ಕರೆಯಲಾಗುತ್ತದೆ. ಅಂದರೆ ಸಣ್ಣ ಭಾಷ್ಯ ಅಥವಾ ಭಾಗಶಃ ಭಾಷ್ಯ ಎಂದು. ಹೀಗಿದ್ದರೂ ತಮ್ಮ ಶುದ್ಧಾದ್ವೈತ ಸಿದ್ಧಾಂತದ ಎಲ್ಲ ಮುಖ್ಯ ಪ್ರಮೇಯಗಳನ್ನು ಅವರು ಇಲ್ಲಿ ವಿವರಿಸಿದ್ದಾರೆ. ಇದಕ್ಕೆ ಸಮನಾದ, ಇದಕ್ಕಿಂತ ಮಹತ್ವದ ಎಂದೂ ಹೇಳಬಹುದಾದ ವಲ್ಲಭರ ಇನ್ನೊಂದು ಕೃತಿಯೆಂದರೆ ಭಾಗವತದ ಮೇಲೆ ಅವರು ಬರೆದ ಭಾಷ್ಯ. ಅದಕ್ಕೆ **ಸುಬೋಧಿನಿ** ಎಂದು ಹೆಸರು. ಉಪನಿಷತ್ತು, ಬ್ರಹ್ಮಸೂತ್ರ ಮತ್ತು ಭಗವದ್ಗೀತೆಗಳನ್ನು ವೇದಾಂತ ತತ್ತ್ವದ ಆಧಾರಸ್ತಂಭಗಳು ಎಂದು ಶ್ರೀಶಂಕರರ ಸಮಯದಿಂದಲೂ ಸಾರ್ವತ್ರಿಕವಾಗಿ ಒಪ್ಪಿಕೊಳ್ಳಲಾಗಿದೆ. ಭಾಗವತವು ಈ ಪ್ರಸ್ಥಾನತ್ರಯಕ್ಕೆ ಸಮನಾದುದು ಎಂದು ವಲ್ಲಭರು ಪ್ರತಿಪಾದಿಸುತ್ತಾರೆ. ಈ ಬಗೆಯ ಭಾವನೆಯನ್ನು ಮಧ್ವಾಚಾರ್ಯರು ಹಿಂದೆಯೇ ಮುಂದಿಟ್ಟಿದ್ದರೂ,



ವಲ್ಲಭರು ಇದನ್ನು ಆಚಾರ್ಯರುಗಳಲ್ಲಿಯೇ ಮೊಟ್ಟಮೊದಲ ಬಾರಿಗೆ ತಾತ್ತ್ವಿಕವಾಗಿ ತಮ್ಮ ಭಾಷ್ಯಗಳಲ್ಲಿ ಎತ್ತಿಹಿಡಿಯುತ್ತಾರೆ ಎನ್ನುವುದು ವೈಶಿಷ್ಟ್ಯ. ಇದೇ ಕಾರಣಕ್ಕಾಗಿ ತಮ್ಮ ಜ್ಞಾನಪ್ರಸಾರ ಯಾತ್ರೆಗಳಲ್ಲಿ ಭಾಗವತ ಸಪ್ತಾಹಕ್ಕೆ ಅವರು ಬಹಳ ಮಹತ್ವವನ್ನು ನೀಡುತ್ತಿದ್ದರು. ತಮ್ಮ ಸಿದ್ಧಾಂತವಾದ ಪುಷ್ಟಿಮಾರ್ಗವನ್ನು ಬೋಧಿಸಲು ಇದು ಬಹಳ ಪ್ರಭಾವಶಾಲಿಯಾದ ಮಾಧ್ಯಮ ಎಂದು ಅವರು ಪರಿಗಣಿಸಿದ್ದರು. ಭಾಗವತದ ಅವರ ಭಾಷ್ಯ ಕೂಡ ಸಂಪೂರ್ಣಗೊಳ್ಳಲಿಲ್ಲ. ಅವರ ಮೂರನೆಯ ತೀರ್ಥಯಾತ್ರೆಯ ಸಮಯ ದಲ್ಲಿ ಅವರು ಗಂಗಾಸಾಗರದಲ್ಲಿ ಸ್ವಲ್ಪ ಕಾಲ ತಂಗಿದ್ದರು. ಅಲ್ಲಿ ಅವರು ಭಾಗವತ ಭಾಷ್ಯವನ್ನು ರಚಿಸಲು ಆರಂಭಿಸಿದರು. ಮೂರನೆಯ ಸ್ಕಂಧದವರೆಗೆ ಅವರ ಬರಹ ಮುಂದುವರೆಯಿತು. ಅಲ್ಪಕಾಲದಲ್ಲಿಯೇ ತನ್ನನ್ನು ಬಂದು ಸೇರಿಕೊಳ್ಳುವಂತೆ ಸೃಷ್ಟಿಕರ್ತನಾದ ಪರಮಾತ್ಮನ ಕರೆಯನ್ನು ಅವರು ಆಲಿಸಿದರಂತೆ. ಹಾಗೆಂದೇ, ಅವರು ಇತರ ಸ್ಕಂಧಗಳನ್ನು ಬಿಟ್ಟು, ಹತ್ತನೆಯ ಸ್ಕಂಧಕ್ಕೆ ನೇರವಾಗಿ ಭಾಷ್ಯವನ್ನು ಬರೆಯಲು ಆರಂಭಿಸಿದರು. ಹತ್ತನೆಯ ಸ್ಕಂಧದಲ್ಲಿ ಶ್ರೀಕೃಷ್ಣ ಜನ್ಮ ಮತ್ತು ಅವನ ಲೀಲೆಯ ವಿಸ್ತಾರವಾದ ಕಥೆಯು ಬರುವುದರಿಂದ ಅದು ಬಹಳ ಮಹತ್ವ ವನ್ನು ಪಡೆದುಕೊಂಡಿದೆ. ಹತ್ತನೆಯ ಸ್ಕಂಧದ ವಿವರಣೆಯನ್ನು ಸಂಪೂರ್ಣಗೊಳಿಸಿದ

ವಲ್ಲಭರು ಹನ್ನೊಂದನೆಯ ಸ್ಕಂಧಕ್ಕೆ ವ್ಯಾಖ್ಯಾನವನ್ನು ಬರೆಯುತ್ತಿದ್ದರು. ಆ ಸಮಯದಲ್ಲಿ ತಮ್ಮ ಜೀವಿತಾವಧಿಯನ್ನು ಕೊನೆಗೊಳಿಸಿ ಹಿಂತಿರುಗುವಂತೆ ಮತ್ತೆ ಭಗವಂತನ ಆದೇಶ ಅವರಿಗಾಯಿತು. ಹೀಗೆ ಅವರು ಬ್ರಹ್ಮಸೂತ್ರ ಭಾಷ್ಯ ಮತ್ತು ಭಾಗವತ ಭಾಷ್ಯಗಳನ್ನು ಪೂರ್ಣಗೊಳಿಸಲು ಸಾಧ್ಯವಾಗಲೇ ಇಲ್ಲ. ಅವರು ಆ ಕಾಲದಲ್ಲಿ ಇನ್ನಿತರ ಮಹತ್ವದ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರಿಂದ ಈ ಕಾರ್ಯ ಸಾಧ್ಯವಾಗದೆ ಇದ್ದಿರಬಹುದು. ಅಥವಾ ತಮಗೆ ಆಚಾರ್ಯ ಎಂಬ ಹೆಸರು ಬರುವ ವಿಷಯದಲ್ಲಿ ಅವರಿಗೆ ಕಿಂಚಿತ್ತೂ ಆಸಕ್ತಿ ಇಲ್ಲದಿರಬಹುದು. ಅವರಿಗೆ ಆಚಾರ್ಯ ಎಂಬ ಪದವಿ ಲಭಿಸಿದ್ದು, ಅವರ ಅವಸಾನದ ನಂತರವೇ.

ಇದಲ್ಲದೆ ವಲ್ಲಭರು ಜೈಮಿನಿಯ ಪೂರ್ವ ಮೀಮಾಂಸಾ ಸೂತ್ರಗಳಿಗೆ ಭಾಷ್ಯ ಮತ್ತು ಕಾರಿಕೆಗಳನ್ನು (ವಿವರಣಾತ್ಮಕ ಶ್ಲೋಕಗಳು) ಬರೆದಿದ್ದಾರೆ. ಈಗ ಕಾರಿಕೆಗಳು ಮಾತ್ರ ಲಭ್ಯ. ವಲ್ಲಭರು ಹಲವಾರು ಸಂಕ್ಷಿಪ್ತ ರಚನೆಗಳನ್ನು ಕೂಡ ಮಾಡಿದ್ದಾರೆ. ಅವುಗಳಲ್ಲಿ ಕೆಲವು ಶ್ಲೋಕಗಳು ಮಾತ್ರವೇ ಇವೆ. ಅವೆಲ್ಲವೂ ತತ್ತ್ವ ಜಿಜ್ಞಾಸೆಯಲ್ಲಿ ಬರುವ ಹಲವು ಸಮಸ್ಯೆಗಳ ಮತ್ತು ಜೀವನ ವಿಧಾನದ ಕುರಿತಾಗಿವೆ. ಇವೆಲ್ಲವೂ ಒಟ್ಟುಸೇರಿ ೧೬ ಗ್ರಂಥಗಳಾಗುತ್ತವೆ. ಇವೆಲ್ಲವನ್ನೂ **ಷೋಡಶ ಗ್ರಂಥ** ಎಂಬ ಒಂದೇ ಹೆಸರಿನಿಂದ ಕರೆಯಲಾಗುತ್ತದೆ. '**ತತ್ವಾರ್ಥ ದೀಪ ನಿಬಂಧ**' ಎಂಬ ಮತ್ತೊಂದು ಗ್ರಂಥವನ್ನೂ ವಲ್ಲಭರು ರಚಿಸಿದರು. ಇದು ಮೇಲೆ ಉಲ್ಲೇಖಿಸಿದ ಹದಿನಾರು ಗ್ರಂಥಗಳಿಗಿಂತಲೂ ದೊಡ್ಡದು. ಇದು ಅವರ ಸಿದ್ಧಾಂತದ ಕೈಪಿಡಿಯಂತೆ ಇದೆ. ಇದರಲ್ಲಿ ಅವರು ದೇವತಾಶಾಸ್ತ್ರ ಮತ್ತು ಅವರು ಪ್ರತಿಪಾದಿಸುವ ಜೀವನವಿಧಾನದ ಬಗ್ಗೆ ವಿವರಿಸುತ್ತಾರೆ. ಈ ಎಲ್ಲ ಗ್ರಂಥಗಳೂ ಸಂಸ್ಕೃತದಲ್ಲಿವೆ. ಇದಲ್ಲದೆ ವಲ್ಲಭರು ಅಂದಿನ ಕಾಲದ ಆಡುಭಾಷೆಯಾದ ವ್ರಜಭಾಷೆಯಲ್ಲಿ ಐದು ಪುಸ್ತಕಗಳನ್ನು ಬರೆದಿದ್ದಾರೆ.

### ವಲ್ಲಭರ ಸಂನ್ಯಾಸ ಮತ್ತು ಅವಸಾನ

ವಲ್ಲಭರು ಐವತ್ತೆರಡು ವರ್ಷಗಳ ಕಾಲ ಬದುಕಿದ್ದರು. ಕ್ರಿಯಾಶಾಲಿಯಾಗಿದ್ದ ಅವರ ಅವಸಾನವಾದದ್ದು ೧೫೩೨ರಲ್ಲಿ. ಅವರು ತಾವು ಬದುಕಿದ್ದಷ್ಟು ಕಾಲ ಭಕ್ತಿಭಾವದಿಂದ ಭಗವಂತನಲ್ಲಿ ತನ್ಮಯರಾಗಿದ್ದರು. ಆ ಮೂಲಕ ಇತರರಿಗೆ ಸ್ಫೂರ್ತಿ ನೀಡುವ ಜೀವನವನ್ನು ನಡೆಸಿದರು. ಹಾಗೆಯೇ ಅವರ ಅಂತಿಮ ದಿನಗಳು ಕೂಡ ಅಷ್ಟೇ ಸ್ಫೂರ್ತಿಯುತವಾಗಿದ್ದವು. ತಮ್ಮ ಬಾಳಿನ ಕಡೆಯ ವರ್ಷದವರೆಗೆ ಅವರು ಗೃಹಸ್ಥ ಜೀವನವನ್ನು ನಡೆಸಿದರು. ತಮ್ಮ ತಾಯಿ, ಪತ್ನಿ ಮತ್ತು ಇಬ್ಬರು ಗಂಡುಮಕ್ಕಳ ಜೊತೆಗೆ ವಾಸವಾಗಿದ್ದರು. ಹೀಗೆ ಪುಷ್ಟಿಮಾರ್ಗದಲ್ಲಿ ತಾಪಸಿಕ ಜೀವನ ಅವಶ್ಯವಿಲ್ಲ ಎನ್ನುವುದನ್ನು ಸ್ವತಃ ತೋರಿಸಿಕೊಟ್ಟರು. ವಲ್ಲಭರ ಪ್ರಕಾರ ಸಂನ್ಯಾಸವೆಂದರೆ ಸಾಧಕನು ಭಗವಂತನ ವಿರಹವನ್ನು ಉತ್ಕಟವಾಗಿ ಭಾವಿಸುವ ಹಂತವಾಗಿದೆ. ಆ ಹಂತದಲ್ಲಿ ಅವನು ತನ್ನ ಪ್ರಾಕೃತಿಕ ದೇಹವನ್ನು ತ್ಯಜಿಸಿ ಭಗವಂತನಲ್ಲಿ ಪೂರ್ಣವಾಗಿ ತನ್ಮಯನಾಗುವ ಭಾವವನ್ನು ಬೆಳೆಸಿಕೊಳ್ಳಬೇಕು. ದೇಹತ್ಯಾಗದಲ್ಲಿ ಅಂತಿಮಗೊಳ್ಳುವ ಈ ಪರಮಸ್ಥಿತಿಯ ವಿವರಣೆಯನ್ನು ವಲ್ಲಭರು ತಮ್ಮ **ಸಂನ್ಯಾಸ ನಿರ್ಣಯ** ಎಂಬ ಸಣ್ಣ ಪುಸ್ತಕದಲ್ಲಿ ವಿಶದವಾಗಿ ವಿವರಿಸಿದ್ದಾರೆ. ಜಗತ್ತಿನ ಬಾಳನ್ನು ಕೊನೆಗಾಣಿಸುವಂತೆ ಈ ಹಿಂದೆಯೇ ಅವರು ಎರಡು ಬಾರಿ ಭಗವಂತನಿಂದ ಆದೇಶ ಪಡೆದುಕೊಂಡಿದ್ದರು. ಆದರೆ ಅವರು ತಮ್ಮ ಜೀವಿತಕಾರ್ಯದ ಬಹುಭಾಗವನ್ನು ಪೂರ್ಣಗೊಳಿಸುವವರೆಗೂ ಪ್ರತೀಕ್ಷೆ ಮಾಡಿದರು. ಅನಂತರ ಅವರು ಮಾಧವೇಂದ್ರ ಪುರಿ ಎಂಬ ಸಂನ್ಯಾಸಿಗಳಿಗೆ ಹೇಳಿ ಕಳಿಸಿದರು. ಇವರು ಮಾಧ್ವ ಸಂಪ್ರದಾಯದ ಒಬ್ಬ ಯತಿಗಳು. ಈ ಹಿಂದೆಯೇ ಅವರು ವಲ್ಲಭರಿಗೆ ಭಾಗವತದ ಅಧ್ಯಯನವನ್ನು ಪರಿಚಯಿಸಿದ ವೃತ್ತಾಂತವನ್ನು ನಾವೀಗಾಗಲೇ ನೋಡಿದ್ದೇವೆ. ಹಾಗೆಯೇ ಈ ಮಹಾತ್ಮರು ಗೋವರ್ಧನಧಾರಿಯ ದೇಗುಲವನ್ನು ಕಟ್ಟುವುದರಲ್ಲಿಯೂ ವಲ್ಲಭರಿಗೆ ತಮ್ಮ ಸಹಾಯ ಹಸ್ತವನ್ನು ನೀಡಿದ್ದರು. ಈಗ ವಲ್ಲಭರು ಆ ಮಾಧವೇಂದ್ರ ಪುರಿಗಳಿಂದಲೇ ಸಂನ್ಯಾಸವನ್ನು ಸ್ವೀಕರಿಸಿ, **ಪೂರ್ಣಾನಂದ** ಎಂಬ ನಾಮಧೇಯವನ್ನು ಧರಿಸಿದರು. ಒಂದು ವಾರದ ಕಾಲ ತಮ್ಮ ಸ್ವಗೃಹದಲ್ಲಿನ ಒಂದು ಕೊಠಡಿಯಲ್ಲಿ ಏಕಾಂತವಾಗಿ ಕಳೆದರು. ತದನಂತರ ವಾರಾಣಸಿಗೆ ಪರಿವ್ರಾಜಕರಾಗಿ ಹೋದರು. ಅವರ ಪೂರ್ವಾಶ್ರಮದ ಮಕ್ಕಳು ಮತ್ತು ಭಕ್ತರು ಅವರನ್ನು ನೋಡಲು ವಾರಾಣಸಿಗೆ ಹೋದರು. ಅವರಿಗೆಲ್ಲ ಅಂತಿಮ ಸಂದೇಶವಾಗಿ ವಲ್ಲಭರು ಮೂರು ಶ್ಲೋಕಗಳನ್ನು ಒಂದು ಕಲ್ಲಿನ ಮೇಲೆ ಕೆತ್ತಿ ಅವರಿಗೆ ನೀಡಿದರು. ಏಕೆಂದರೆ ವಲ್ಲಭರು ಆಗ ಮೌನವ್ರತವನ್ನು ಧರಿಸಿದ್ದರು. ಆ ಸಂದೇಶ ಹೀಗಿತ್ತು: ''ನೀವು ಯಾವುದೇ ರೀತಿಯಲ್ಲಿ , ದೈಹಿಕವಾಗಿಯಾಗಲಿ, ಮಾನಸಿಕವಾಗಿಯಾಗಲಿ ಭಗವಂತನಿಂದ ಪ್ರತ್ಯೇಕಗೊಂಡರೆ, ಕಾಲನ ಆಧಿಪತ್ಯಕ್ಕೆ ಸಿಲುಕಿರುವ ಈ ದೇಹ ಮನಸ್ಸುಗಳು ಆ ಕಾಲದಿಂದಲೇ ಭಕ್ಷಿಸಲ್ಪಡುತ್ತವೆ. ಇದು ನನ್ನ ದೃಢವಾದ ನಂಬಿಕೆ. ಭಗವಂತನಾದ ಶ್ರೀಕೃಷ್ಣನು ಈ ಜಗತ್ತಿಗೆ ಸೇರಿದವನಲ್ಲ, ಪ್ರಪಂಚದ ಯಾವುದೇ ಸಂಗತಿಗಳ ಮೇಲೆ ಅವನಿಗೆ ಯಾವ ಗೌರವವೂ ಇಲ್ಲ. ಹೀಗಿರುವಾಗ ನಾವು ಜಗತ್ತಿನ ಮೇಲಿನ ವ್ಯಾಮೋಹವನ್ನು ತ್ಯಜಿಸಿ ಭಗವಂತನಾದ ಶ್ರೀಕೃಷ್ಣನೊಬ್ಬನಲ್ಲಿ ಮಾತ್ರವೇ ಪ್ರೇಮಭಕ್ತಿಯನ್ನು ಮಾಡಬೇಕು. ಭಗವಂತನೊಬ್ಬನೇ ಇಹಲೋಕ ಮತ್ತು ಪರಲೋಕಗಳೆರಡರಲ್ಲಿಯೂ ಸರ್ವವ್ಯಾಪಕನಾಗಿ ಇರುವವನು. ಆದ್ದರಿಂದ ಗೋಪೀನಾಥನಾದ ಶ್ರೀಕೃಷ್ಣನೊಬ್ಬನೇ ನಮ್ಮ ದೇಹ, ಮನಸ್ಸು, ಆತ್ಮ ಮತ್ತು ಚೈತನ್ಯಗಳ ಮೂಲಕ ಸೇವಿಸಲ್ಪಡಲು ಯೋಗ್ಯನು. ಅವನೊಬ್ಬನೆ ಇಹ ಜಗತ್ತಿನಲ್ಲಿ ಮತ್ತು ಪರಲೋಕದಲ್ಲಿ ಪ್ರಯೋಜನಕ್ಕೆ ಬರುವ ಎಲ್ಲವನ್ನೂ ನಮಗೆ ನೀಡಬಲ್ಲನು.''

ಆ ಅವಧಿಯಲ್ಲಿ ವಲ್ಲಭರು ವಾರಾಣಸಿಯ ಹನುಮಾನ್ ಘಾಟಿನಲ್ಲಿ ತಮ್ಮ ಸಂನ್ಯಾಸಿ ಜೀವನವನ್ನು ಕಳೆಯುತ್ತಿದ್ದರು. ತಮ್ಮ

ಅಂತಿಮ ಸಂದೇಶವನ್ನು ನೀಡಿದ ನಂತರ, ಪವಿತ್ರ ಗಂಗೆಯಲ್ಲಿ ಧುಮುಕಿ, ಕಣ್ಮರೆಯಾದರು. ಆ ಸ್ಥಾನದಿಂದ ಬೆಳಗುತ್ತಿರುವ ಜ್ವಾಲೆಯೊಂದು ಮೇಲೆದ್ದು ಬಂದಿತು. ಇದಕ್ಕೆ ಅಲ್ಲಿ ನೆರೆದಿದ್ದ ಪ್ರೇಕ್ಷಕರೆಲ್ಲರೂ ಸಾಕ್ಷಿಯಾಗಿದ್ದರು. ಆ ಜ್ವಾಲೆಯು ಆಕಾಶದಲ್ಲಿ ಲೀನವಾಗಿ ಹೋಯಿತು.

### ವಲ್ಲಭರ ನಂತರ

ವಲ್ಲಭರ ನಂತರ ಅವರ ಪುತ್ರರಾದ ವಿಠ್ಠಲನಾಥರು ವಲ್ಲಭರ ಪಂಥದ ನೇತಾರರಾದರು. ವಿಠ್ಠಲನಾಥರು ಕೂಡ ಅಪಾರ ಭಕ್ತಿ ಮತ್ತು ಪಾಂಡಿತ್ಯ ಸಂಪನ್ನರಾದವರು. ಅವರು ತಮ್ಮ ತಂದೆಯವರು ಅಪೂರ್ಣಗೊಳಿಸಿದ್ದ ಭಾಷ್ಯಗಳನ್ನು ಪೂರ್ಣಗೊಳಿಸಿದರು. ಹಾಗೆಯೇ ಬ್ರಹ್ಮಸಂಬಂಧವೆಂಬ ಆಚರಣೆಯ ಮೂಲಕ ಪುಷ್ಟಿಮಾರ್ಗವನ್ನು ಅವಲಂಬಿಸಿರುವ ವಲ್ಲಭರ ಅನುಯಾಯಿಗಳಲ್ಲಿ ಹೆಚ್ಚಿನ ಒಗ್ಗಟ್ಟನ್ನು ಮೂಡಿಸಲು ಶ್ರಮವಹಿಸಿದರು. ವಿಠ್ಠಲನಾಥರ ಕಾಲದಲ್ಲಿಯೇ ಪ್ರಾಯಶಃ ಹವೇಲಿಯ ವ್ಯವಸ್ಥೆ ಹುಟ್ಟಿಕೊಂಡಿತು. ದೇವಮಂದಿರಗಳನ್ನು ಭಗವಂತನ ಮನೆ ಎಂದು ಭಾವಿಸಿ, ಅದರಂತೆಯೇ ಅಕ್ಷರಶಃ ನಡೆದುಕೊಳ್ಳುವುದು ಹವೇಲಿ ವ್ಯವಸ್ಥೆಯ ಹಿನ್ನಲೆಯಲ್ಲಿರುವ ತತ್ತ್ವ. ವಲ್ಲಭರು ಗೋಕುಲದಲ್ಲಿ ಗಿರಿಧರನಾಥನ ಮಂದಿರವೊಂದನ್ನು ಮಾತ್ರ ಸ್ಥಾಪನೆ ಮಾಡಿದ್ದರು. ಆ ವಿಗ್ರಹವನ್ನು ಶ್ರೀನಾಥಜಿ ಎಂದು ಪ್ರೀತಿಯಿಂದ ಕರೆಯುತ್ತಾರೆ. ಅನಂತರದ ದಿನಗಳಲ್ಲಿ ಆ ವಿಗ್ರಹವನ್ನು ಅಲ್ಲಿಂದ ವಿಠ್ಠಲನಾಥರ ಮನೆಗೆ ಸ್ಥಳಾಂತರಿಸಲಾಯಿತು. ಆ ವಿಗ್ರಹವು ತಮ್ಮ ಕುಟುಂಬಕ್ಕೆ ಸೇರಿದ್ದು ಎಂದು ಸಾಧಿಸಲು ಹೀಗೆ ಮಾಡಿದರೇನೋ. ನಂತರ, ಔರಂಗಜೇಬನ ಕಾಲದಲ್ಲಿ ಹಿಂದೂಗಳ ಮೇಲೆ ಭೀಕರ ದಬ್ಬಾಳಿಕೆ ಆರಂಭವಾಯಿತು. ಈ ಅವಧಿಯಲ್ಲಿ ವಿಗ್ರಹವನ್ನು ಉದಯಪುರದ ಹತ್ತಿರವಿರುವ ನಾಥದ್ವಾರಕ್ಕೆ ಕೊಂಡೊಯ್ಯಲಾಯಿತು. ಇಂದಿಗೂ ಈ ವಿಗ್ರಹವು ಅಲ್ಲಿ ಆರಾಧಿಸಲ್ಪಡುತ್ತಿದೆ. ಅನಂತರದ ದಿನಗಳಲ್ಲಿ ಇಂಥ ಹತ್ತುಹಲವು ಹವೇಲಿಗಳು ಹುಟ್ಟಿಕೊಂಡವು. ಬಹುತೇಕ ಅವೆಲ್ಲವೂ ವಲ್ಲಭರ ವಂಶಸ್ಥರ ನಿಯಂತ್ರಣದಲ್ಲಿಯೇ ಇವೆ.

ವಲ್ಲಭರು ತಮ್ಮ ಅಂತಿಮ ದಿನಗಳಲ್ಲಿ ಸಂನ್ಯಾಸ ಜೀವನವನ್ನು ನಡೆಸಿದರಾದರೂ, ಅದು ಜೀವನದ ಅಂತಿಮ ಘಟ್ಟದಲ್ಲಿ ಕೈಗೊಳ್ಳಬಹುದಾದ ವ್ರತ ಎಂದು ಮಾತ್ರ ಅದಕ್ಕೆ ಮಹತ್ವವನ್ನು ನೀಡಿದ್ದರು. ಇದು ನಾವು ಗಮನಿಸಬೇಕಾದ ವಿಷಯ. ಗೃಹಸ್ಥ ಜೀವನ ಕೂಡ ಆಧ್ಯಾತ್ಮಿಕ ಜೀವನದ ಬೆಳವಣಿಗೆಗೆ ಅನುಕೂಲಕರ ಎಂಬ ಅಭಿಪ್ರಾಯವನ್ನು ವಲ್ಲಭರು ಹೊಂದಿದ್ದರು. ಹೀಗಾಗಿ ತಮ್ಮ ಪಂಥದಲ್ಲಿ ಧರ್ಮಪ್ರಚಾರ ಮಾಡುವ ಸಂನ್ಯಾಸೀ ಪಂಗಡಕ್ಕೆ ವಲ್ಲಭರು ಅವಕಾಶ ಕಲ್ಪಿಸಲಿಲ್ಲ. ಹವೇಲಿಗಳನ್ನು ಗೃಹಸ್ಥರು, ಅದರಲ್ಲೂ ವಲ್ಲಭರ ವಂಶಸ್ಥರೇ ಇಂದಿಗೂ ನಿಯಂತ್ರಿಸುತ್ತಿದ್ದಾರೆ. ವಲ್ಲಭರ ಪಂಥದಲ್ಲಿ ಅನಂತರದ ದಿನಗಳಲ್ಲಿ, ಭಗವಂತನ ಸ್ವರೂಪಗಳೇ ಎಂದು ಪರಿಗಣಿಸುವ ಮೂರ್ತಿಗಳನ್ನು ವೈಭವದಿಂದ ಪೂಜೆ ಮಾಡುವುದು ಮತ್ತು ಬ್ರಹ್ಮಸಂಬಂಧ ಕ್ರಿಯೆಯನ್ನು ನಡೆಸುವ ಗುರುಗಳನ್ನು ವಿಪರೀತವಾಗಿ ಕೊಂಡಾಡಿ, ಸೇವೆ ಮಾಡುವುದು – ಇದೇ ಪ್ರಧಾನವಾಗುತ್ತ ಹೋಯಿತು. ವಲ್ಲಭರು ಬೋಧಿಸಿದ ಮುಖ್ಯ ಭಕ್ತಿ ಸಾಧನಗಳಾದ ಶ್ರವಣ, ಪಾರಾಯಣ, ಧ್ಯಾನ ಮತ್ತು ಭಗವಂತನ ಸೇವೆಗಳು ಹಿನ್ನೆಲೆಗೆ ತಳ್ಳಲ್ಪಟ್ಟವು. ಇದರ ಪರಿಣಾಮವಾಗಿ ಪಂಥದ ಅನುಯಾಯಿಗಳಲ್ಲಿ ಮತ್ತು ಗುರುಪರಂಪರೆಯಲ್ಲಿ ನೈತಿಕ ಅವನತಿ ಕಂಡುಬಂತು. ಹವೇಲಿಯ ಆಧಿಪತ್ಯವನ್ನು ವಹಿಸಿರುವ ಗುರುವೃಂದದವರು ಅಪಾರ ಸಂಪತ್ತನ್ನು ಶೇಖರಿಸಿ, ಸಮಾಜದ ನಾಯಕರಾಗಿ ಮೆರೆಯಲಾರಂಭಿಸಿದರು. ತಮ್ಮನ್ನು ತಾವು ಮಹಾರಾಜರು ಎಂಬ ಬಿರುದಿನಿಂದ ಕರೆದುಕೊಂಡು, ಭ್ರಷ್ಟಾಚಾರಕ್ಕೆ ಎಡೆ ಮಾಡಿಕೊಟ್ಟ ವೈಭವಯುತವಾದ ಜೀವನವನ್ನು ನಡೆಸಲು ಆರಂಭಿಸಿದರು. ಇದಕ್ಕಿಂತಲೂ ಕೆಡುಕಾದ ವಿಷಯವೇನೆಂದರೆ, ಭವಿಷ್ಯದ ಆಚಾರ್ಯರು ತಮ್ಮನ್ನು ಶ್ರೀಕೃಷ್ಣನ ಅವತಾರಗಳೆಂದೇ ಕರೆಸಿಕೊಳ್ಳಲು ಆರಂಭಿಸಿಬಿಟ್ಟರು! ಮುಗ್ಧ ಮೂಢ ಭಕ್ತರು ಶ್ರೀಕೃಷ್ಣನಿಗೆ ಸಮರ್ಪಿಸುವ ಸೇವೆಗಳನ್ನೆಲ್ಲ ಬ್ರಹ್ಮಸಂಬಂಧ ಆಚರಣೆಯಲ್ಲಿ ಈ ಆಚಾರ್ಯರಿಗೇ ಸಲ್ಲಿಸಲು ಆರಂಭಿಸಿಬಿಟ್ಟರು! ಈ ತಪ್ಪುದಾರಿಗೆ ಎಳೆಯಲ್ಪಟ್ಟ ಭಕ್ತಿಯ ಪರಿಣಾಮವಾಗಿ, ಅನೇಕ ಕೀಳುಮಟ್ಟದ ಆಚರಣೆಗಳು ಆರಂಭಗೊಂಡು, ಕಡೆಯಲ್ಲಿ ಇಡೀ ಪಂಥಕ್ಕೆ ಅಪಕೀರ್ತಿ ಬರುವಂತಾಯಿತು. ಇತ್ತೀಚಿನ ದಿನಗಳಲ್ಲಿ ಪ್ರಬುದ್ಧ ನಾಗರಿಕರ ಅಭಿಪ್ರಾಯಗಳನ್ನು ತೆಗೆದುಕೊಂಡು, ಈ ಲೋಪದೋಷಗಳನ್ನು ಸರಿಪಡಿಸಿಕೊಳ್ಳುವ ಸುಧಾರಣಾ ಆಂದೋಲನಗಳು ಆರಂಭಗೊಂಡಿರುವುದು ಸ್ವಾಗತಾರ್ಹ ಸಂಗತಿ. *(ಮುಗಿಯಿತು)*

